INDIAN JOURNAL OF HISTORY AND ARCHAEOLOGY
ISSN (e):2582-225X
Vol-4, Issue -1, May-June, 2022,
PageNo,01-08
Peer Reviewed Journal, Referred Journal

# "ಕೋಟಿಗಾನಹಳ್ಳಿ ರಾಮಯ್ಯ ಅವರ ನಾಟಕಗಳಲ್ಲಿ ಸಾಮಾಜಿಕ ಪ್ರಜ್ಞೆ"

**ಪ್ರಕಾಶ್ ಕೆ.**[1]

ಸಾಹಿತ್ಯ ಮತ್ತು ಸಮಾಜದ ನಡುವಣ ಸಂಕೀರ್ಣವಾದ ಸಂಬಂಧವು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ತೆರೆದುಕೊಳ್ಳುತ್ತದೆ. ಒಬ್ಬ ಸಮಾಜಶಾಸ್ತ್ರಜ್ಞ ಒಂದು ಕೃತಿಯನ್ನು ಸಾಮಾಜಿಕ ದಾಖಲೆಯಾಗಿ ಓದಲು ಸಾಧ್ಯ. ಆದರೆ ಒಬ್ಬ ಸಾಹಿತಿ ಸಮಾಜವನ್ನು ಸ್ಥಿರವಾದ ರೂಪದಲ್ಲಿ ಕಾಣಲು ಸಾಧ್ಯವಿಲ್ಲ. ಅದು ಅವನಿಗೆ ಪರಿವರ್ತನೆಗೊಳ್ಳುತ್ತಿರುವುದರ ಸಂಕೇತವಾಗಿ ಕಾಣಬಹುದು. ಸಮಾಜದಲ್ಲಿನ ಸಮಸ್ಯೆಗಳನ್ನು ಅರಿಯಲು ಮತ್ತು ಅರಿವು ಮೂಡಿಸಲು ಕೃತಿಯಿಂದ ಪ್ರವೇಶಿಸಿ, ಕೃತಿಯಿಂದಲೇ ಹಿಂದಿರುಗುವ ಪ್ರಯತ್ನ ಕೂಡ ಆಗಿರುತ್ತದೆ ಎನ್ನಬಹುದು. ಹಾಗಾಗಿ ಸಾಹಿತ್ಯ ಕೃತಿಯೊಂದರ ಅಧ್ಯಯನವೆಂದರೆ ಆ ಕೃತಿಯ ಸಾಹಿತ್ಯಕ ಪರಿಸರವೆ ಹಿಂದಿನ ಸಾಮಾಜಿಕತೆಯ ಅಧ್ಯಯನವೇ ಆಗಿರುತ್ತದೆ. ಸಾಮಾಜಿಕ ಸಮಸ್ಯೆಗಳು, ಮೌಲ್ಯಗಳು, ಸಂಕಷ್ಟಗಳು ಎಲ್ಲವನ್ನು ಒಳಗೊಂಡ ಕೃತಿಯೊಂದು ಬಯಸುವುದು ಸಾಮಾಜಿಕ ಸ್ವಾಸ್ಥ್ಯವೇ ಆಗಿರುತ್ತದೆ. ಇಂತಹ ಸ್ವಾಸ್ಥ್ಯಕ್ಕೆ ಅಡ್ಡಿಯಾಗುವ ಅಂಶಗಳು ಸಾಮಾಜಿಕ ಸಮಸ್ಯೆಗಳಾಗಿ, ಪೂರಕವಾಗಿ ಬೇಕಾದಂತಹ ಅಂಶಗಳೂ ಸಾಮಾಜಿಕ ಕಳಕಳಿಯೂ ಆಗಿ ಪ್ರತಿನಿಧೀಕರಣಗೊಂಡಿರುತ್ತದೆ ಎನ್ನುವುದನ್ನು ಮರೆಯುವಂತಿಲ್ಲ.

ಯಾವುದೇ ಸಾಹಿತ್ಯ/ಒಬ್ಬ ಲೇಖಕ ಕಾವ್ಯ, ಕಥೆ, ಕಾದಂಬರಿ, ನಾಟಕ ಸಾಹಿತ್ಯದ ಇನ್ನಿತರ ಪ್ರಕಾರದಲ್ಲಿ ಸಾಹಿತ್ಯವನ್ನು ಸೃಷ್ಟಿ ಮಾಡಿದರೆ ಅದರ ಮೂಲ ಉದ್ದೇಶ ಸಮಾಜದ ಬದಲಾವಣೆಯ ಹಂಬಲ ಹೊಂದಿರಬೇಕು. ಸಮಕಾಲೀನ ಸಂದರ್ಭದ ಸಮಸ್ಯೆಗಳನ್ನು ತನ್ನ ಕೃತಿಯಲ್ಲಿ ಬಿಂಬಿಸಿ ಅದಕ್ಕೆ ಸೂಕ್ತ ಪರಿಹಾರ ಕ್ರಮಗಳನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಸಾಹಿತ್ಯ ರಚನೆಯನ್ನು ಮಾಡಬೇಕು. ಈ ನಿಟ್ಟಿನಲ್ಲಿ ಕೋಟಿಗಾನಹಳ್ಳಿ ರಾಮಯ್ಯ ಅವರ ನಾಟಕಗಳು ಪ್ರಮುಖವಾಗಿ ರಚನೆಗೊಂಡಿವೆ ಎನ್ನಬಹುದು. ಅವರ ನಾಟಕಗಳಲ್ಲಿ ಮುಖ್ಯವಾಗಿ ಸಾಮಾಜಿಕ, ಶೈಕ್ಷಣಿಕ, ರಾಜಕೀಯ ವಿಚಾರಗಳು ಹೇಗೆ ಅಭಿವ್ಯಕ್ತಿಗೊಂಡಿವೆ ಎಂಬುದನ್ನು ಗಮನಿಸಬಹುದಾಗಿದೆ. ಕೋಟಿಗಾನಹಳ್ಳಿ ರಾಮಯ್ಯ ಅವರ ಗಾದೆಗುರ್ರಕ್ಕ ಮತ್ತು ಕಳ್ಳಬುಂಡೆ ನಮ್ಮವ್ವ ನಾಟಕಗಳಲ್ಲಿ ಗ್ರಾಮೀಣ ನೈರ್ಮಲ್ಯ ಮತ್ತು ಸ್ವಚ್ಛತೆ ಹಾಗೂ ಮದ್ಯಪಾನದಂತಹ ಸಮಸ್ಯೆಗಳನ್ನು ಕೇಂದ್ರವಾಗಿಟ್ಟುಕೊಂಡು ರಚಿಸಲಾಗಿದೆ.

---

1. **ಸಂಶೋಧಕರು,ಕನ್ನಡ ವಿಭಾಗ,ಮಹಾರಾಜ ಕಾಲೇಜು, ಮೈಸೂರು.**

ಗ್ರಾಮೀಣ ಸ್ವಚ್ಛತೆ ಮತ್ತು ನೈರ್ಮಲ್ಯವನ್ನು ಕುರಿತು ಬರೆದಿರುವ ನಾಟಕ 'ಗಾದೆ ಗುರ್ರಕ್ಕ'. ಜೊತೆಗೆ ಬಯಲು ಮಲ ವಿಸರ್ಜನೆ ಪದ್ಧತಿಯನ್ನು ಖಂಡಿಸುವ ರೀತಿಯಲ್ಲಿ ನಾಟಕ ಮೂಡಿಬಂದಿದೆ. ನಾಟಕದ ಮುಖ್ಯಪಾತ್ರ 'ಗುರ್ರಕ್ಕ' ಆಗಿದ್ದಾಳೆ. ಆರೋಗ್ಯ ಕಾರ್ಯಕರ್ತನ ಪಾತ್ರವು ಬಹಳ ಪ್ರಮುಖವಾಗಿ ಕಂಡುಬರುತ್ತದೆ. 'ಸದೃಢವಾದ ದೇಹದಲ್ಲಿ ಸದೃಢವಾದ ಮನಸ್ಸು ಇರುತ್ತದೆ' ಎಂಬ ಅರಿಸ್ಟಾಟಲ್ ಮಾತಿನಂತೆ, ನಾವು ವಾಸಿಸುವ ಪರಿಸರವನ್ನು ಆರೋಗ್ಯ ದೃಷ್ಟಿಯಿಂದ ಸ್ವಚ್ಛವಾಗಿಟ್ಟುಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಬೇಕು. ಈ ದಿಸೆಯಲ್ಲಿ ಪ್ರತಿಯೊಬ್ಬರು ಸ್ವಯಂ ಪ್ರೇರಿತವಾಗಿ ಸ್ವಚ್ಛತಾ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು. ಈ ಕಾರ್ಯ ನಮ್ಮಿಂದಲೆ, ನಮ್ಮ ಪರಿಸರದಿಂದಲೇ ಪ್ರಾರಂಭವಾಗಿರಬೇಕು. ಹಾಗಿದ್ದಾಗ ಮಾತ್ರ ಉತ್ತಮ ಜೀವನ ನಡೆಸಲು ಸಾಧ್ಯವಾಗುತ್ತದೆ. ಆರೋಗ್ಯ ನಮ್ಮ ದೈಹಿಕ, ಮಾನಸಿಕ, ಸಾಮಾಜಿಕ ಮತ್ತು ಬೌದ್ಧಿಕ ಸುಸ್ಥಿತಿಯಾಗಿದ್ದು ಅದನ್ನು ಒಳ್ಳೆಯ ರೂಪದಲ್ಲಿ ಪಡೆದು ಬದುಕಬೇಕಾಗಿದೆ. ಸ್ವಚ್ಛತೆಯನ್ನು ಕಾಪಾಡಿಕೊಂಡು ಹಲವಾರು ರೋಗಗಳಂದ ಮುಕ್ತರಾಗುವ ಆರೋಗ್ಯಕರವಾದ ಸಮಾಜವನ್ನು ನಿರ್ಮಿಸುವುದರ ಬಗೆಗೆ ಅರಿವು ಮೂಡಿಸುವುದು ಈ ನಾಟಕದ ಆಶಯವಾಗಿದೆ. ಇದು ಮೂರು ದೃಶ್ಯಗಳಂದ ಕೂಡಿದೆ.

ಮೊದಲನೆ ದೃಶ್ಯದಲ್ಲಿ ಬೋರ್‌ವೆಲ್ ಬಳಿ ಜನರು ದಿನನಿತ್ಯದ ಚಟುವಟಿಕೆಗಳನ್ನು ಮಾಡುವ ಸನ್ನಿವೇಶದಿಂದ ನಾಟಕವು ಆರಂಭವಾಗುತ್ತದೆ. ಗುರ್ರಕ್ಕ ತನ್ನ ಮಕ್ಕಳನ್ನು ಬೋರ್‌ವೆಲ್ ಬಳಿ ಮಲವಿಸರ್ಜನೆಗಾಗಿ ಕೂರಿಸುವುದು, ದನ ತೊಳೆಯುವುದು, ಬಟ್ಟೆ ಒಗೆಯುವುದು, ಮುಖ ತೊಳೆಯುವುದು ಇನ್ನಿತರ ಚಟುವಟಿಕೆಗಳನ್ನು ಮಾಡುವುದು ಹಳ್ಳಿಯ ಜನರ ಅವಿವೇಕಕ್ಕೆ ಹಿಡಿದ ಸಾಕ್ಷಿಯಾಗಿದೆ. ಆರೋಗ್ಯ ಕಾರ್ಯಕರ್ತ ಜನರಿಗೆ ಎಷ್ಟು ತಿಳುವಳಿಕೆ ನೀಡಿದರು ಜನರು ಆತನ ಬಗೆಗೆ ಸ್ವಲ್ಪವೂ ಲಕ್ಷ್ಯ ಕೊಡುವುದಿಲ್ಲ. ಮತ್ತೊಬ್ಬ ಹೆಂಗಸು ಬೋರ್‌ವೆಲ್ ಬಳಿ ಸಗಣಿ ಸುರಿದು ತಿಪ್ಪೆ ಗುಂಡಿ ಮಾಡುತ್ತಾಳೆ. ಇದನ್ನು ಕಂಡ ಆರೋಗ್ಯಕಾರ್ಯಕರ್ತ ದಿಗ್ಭ್ರಮೆಗೊಳ್ಳುತ್ತಾನೆ. ಈ ಎಲ್ಲಾ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಪ್ರಯತ್ನಪಟ್ಟು ವಿಫಲವಾಗುತ್ತಾನೆ.

ಹಳ್ಳಿಯ ಜನರ ತಾತ್ಸರ ಮನೋಭಾವನೆಗೆ ಎದೆಗುಂದದೆ ಶುಚಿತ್ವ ಕಾಪಾಡಿಕೊಳ್ಳುವುದನ್ನು ಕುರಿತು ಭಾಷಣದ ಮೂಲಕ ಅರಿವು ಮೂಡಿಸಲು ಮುಂದಾಗುತ್ತಾನೆ. ಬಯಲು ಮಲವಿಸರ್ಜನೆ ಪದ್ಧತಿಯ ಬಗೆಗೆ ಜಾಗೃತಿಯನ್ನು ಮೂಡಿಸುತ್ತಾನೆ. "ಬಯಲಲ್ಲಿ ಮಲ ವಿಸರ್ಜನೆ ಮಾಡಬಾರದು ಮಲದಲ್ಲಿ ಅನೇಕ ಬಗೆಯ ರೋಗಾಣು ಇರುತ್ತದೆ. ಮಲದ ಮೇಲೆ ನೊಣ ಕೂತಾಗ ಅದರ ಮೈಗೆ ಈ ರೋಗಾಣು ಮೆತ್ತಿಕೊಳ್ಳುತ್ತದೆ. ನೊಣ ಬಂದು ತಿನ್ನೋ ಆಹಾರದ ಮೇಲೆ ಕೂತಾಗ, ಆಹಾರದ ಮೂಲಕ ರೋಗಾಣು ಮನುಷ್ಯರ ಹೊಟ್ಟೆ ಸೇರಿ ಭೇದಿ, ಅತಿಸಾರ ಭೇದಿ, ಕಾಲಾರ, ಪೋಲಿಯೋ, ಕಾಮಾಲೆ, ಟೈಫಾಯಿಡ್ ಗ್ಯಾರಂಟಿ, ಆದ್ದರಿಂದ ಬಯಲಲ್ಲಿ ಮಲವಿಸರ್ಜನೆ ಮಾಡಬಾರದು.

ದುರ್ವಾಸನೆ ರೋಗ-ರುಜಿನ, ಅಸಹ್ಯ. ಅದಕ್ಕೆ ಮನೆ ಹತ್ತಿರಾನೆ ಒಂದು ಪುಟ್ಟ ಕಕ್ಕಸು ಗುಂಡಿ ಮಾಡಿಕೊಂಡ್ರೆ ತುಂಬಾ ಅನುಕೂಲ, ಬಯಲಲ್ಲಿ ಹೋಗೋದು ತಪ್ಪುತ್ತದೆ. ಹೆಣ್ಣು ಮಕ್ಕಳು ರಾತ್ರಿ ಆಗಲಿ ಅಂತ ಕಾಯ್ಕೊಂಡು ಒದ್ದಾಡೋದು ತಪ್ಪುತ್ತೆ"[2] ಎನ್ನುವುದು ಬಯಲು ಶೌಚದಿಂದ ಆಗುವ ಪರಿಣಾಮವನ್ನು ಚಿತ್ತರಿಸುತ್ತದೆ.

ದೃಶ್ಯ ಎರಡರಲ್ಲಿ ಗುರ್ರಕ್ಕನ ಅನೈರ್ಮಲ್ಯದಿಂದ ಮಕ್ಕಳಿಗೆ ಉಂಟಾಗುವ ಕಾಯಿಲೆ, ಅದನ್ನು ನಿವಾರಿಸಿಕೊಳ್ಳಲು ದೇವಿಯಲ್ಲಿ ಮೊರೆ ಹೋಗುವುದು, ಗುರ್ರಕ್ಕನ ಮಕ್ಕಳನ್ನು ಕಾಪಾಡುವಲ್ಲಿ ಆರೋಗ್ಯ ಕಾರ್ಯಕರ್ತನ ಕರ್ತವ್ಯ ನಿಷ್ಟೆ ಪ್ರಮುಖವಾಗಿ ಕಂಡುಬರುತ್ತದೆ. ಅಶುಚಿತ್ವದಿಂದ ಮಕ್ಕಳಲ್ಲಿ ಜ್ವರ ವಾಂತಿ, ತಲೆನೋವು ಕಾಣಿಸಿಕೊಳ್ಳುತ್ತದೆ. ಅತಿಸಾರ ಭೇದಿಯ್ನು ಹತೋಟಿಯಲ್ಲಿಡಲು ಆರೋಗ್ಯ ಕಾರ್ಯಕರ್ತ ಉಪಾಯವನ್ನು ನೀಡುತ್ತಾನೆ. "ಒಂದು ತಂಬಿಗೆ ನೀರನ್ನು ಚನ್ನಾಗಿ ಕುದಿಸಿ ಆರಿಸಬೇಕು. ಅದಕ್ಕೆ ಒಂದು ಮುಷ್ಠಿ ಸಕ್ಕರೆ, ಒಂದು ಚಿಟುಕಿ ಅಡುಗೆಸೋಡ ಬೆರೆಸಬೇಕು. ಒಂದು ನಿಂಬೆ ಹಣ್ಣಿನ ಹೋಳಿದ್ದರೆ ಅದರ ರಸಾನ ನೀರಿಗೆ ನಾಲ್ಕು ಹನಿ ಹಿಂಡಬೇಕು. ಇಷ್ಟೇ.. ಇಷ್ಟು ಮಾಡಿಬಿಟ್ರೆ ಇದೇ ಜೀವ ಜಲ ಮಗುವಿನ ಪ್ರಾಣ ಕಾಪಾಡೋಕೆ ಜೀವ ಜಲ ಇದನ್ನು 5 ರಿಂದ 10 ನಿಮಿಷ ಕೊಡ್ತಾನೆ ಇರ್ಬೇಕು. ಹೀಗೆ ವಿಷಮಶೀತ ಜ್ವರ ಕಾಣಿಸಿಕೊಂಡರೆ ಮನೆಯಲ್ಲಿಯೇ 5-10 ನಿಮಿಷಗಳಲ್ಲಿ ನಾವೇ ಸ್ವತಃ ಔಷಧಿಯನ್ನು ತಯಾರಿಸಿಕೊಳ್ಳಬಹುದು."[3] ಎನ್ನುವುದು ಅತಿಸಾರ ಬೇಧಿಯ ಸ್ವರೂಪವನ್ನು ತಿಳಿಸುತ್ತದೆ. ಒಮ್ಮೆ ಅದರ ಬಗೆಗೆ ಅನಾಸಕ್ತಿ ತೋರಿದರೆ ಪ್ರಾಣವನ್ನು ತೆಗೆದು ಬಿಡುವಷ್ಟರ ಮಟ್ಟಿಗೆ ತಲುಪುತ್ತದೆ.

ಆರೋಗ್ಯ ಕಾರ್ಯಕರ್ತನ ತಿಳುವಳಿಕೆಯಿಂದ ಗುರ್ರಕ್ಕನ ಮಕ್ಕಳೂ ಬದುಕುಳಿಯುತ್ತಾರೆ. ಇದರಿಂದ ಎಚ್ಚೆತ್ತ ಗುರ್ರಕ್ಕ ತನ್ನ ಮೊಂಡುತನವನ್ನು ಬಿಟ್ಟು ಸ್ವತಃ ತಾನೇ ಜನರಲ್ಲಿ ಆರೋಗ್ಯದ ಬಗೆಗೆ ತಿಳುವಳಿಕೆಯನ್ನು ಮೂಡಿಸುತ್ತಾಳೆ. ಇದರ ಫಲವಾಗಿ ಆ ಊರಿನಲ್ಲಿ ಐದು ಶೌಚಾಲಯಗಳು ನಿರ್ಮಾಣವಾಗುತ್ತದೆ. ಬಯಲು ಮಲ ವಿಸರ್ಜನೆ ಎನ್ನುವುದು ಸಾಮಾಜಿಕ ಅಪರಾಧ ಎನ್ನಬಹುದು. ಅದರಿಂದ ಪರಿಸರ ರೋಗಾಣುಗಳ ಗೂಡಾಗುತ್ತದೆ. ಶೌಚಾಲಯವನ್ನು ನಿರ್ಮಿಸಿಕೊಳ್ಳುವುದಕ್ಕೆ ಸರ್ಕಾರ ಗ್ರಾಮ ಪಂಚಾಯ್ತಿ ವತಿಯಿಂದ ಧನ ಸಹಾಯವನ್ನು ನೀಡುತ್ತದೆ. ಅದನ್ನು ಎಲ್ಲರು ಸದ್ಬಳಕೆ ಮಾಡಿಕೊಳ್ಳಬೇಕು. ಗಿರಿಜನರು ಮತ್ತು ಪರಿಶಿಷ್ಟ ಜಾತಿ/ಪಂಗಡಗಳಿಗೆ ಶೇ.70ರಷ್ಟು ಧನ ಸಹಾಯವನ್ನು ಒದಗಿಸುತ್ತದೆ. ಅದನ್ನು ಎಲ್ಲರು ಉಪಯೋಗಿಸಿಕೊಳ್ಳಬೇಕು ಎನ್ನುವುದು ಮುಖ್ಯ ಸಂಗತಿಯಾಗಿದೆ.

ಆರೋಗ್ಯ ಪ್ರತಿಯೊಬ್ಬರಿಗೂ ಮುಖ್ಯವಾದದ್ದು. ಅದನ್ನು ಕಾಪಾಡಿಕೊಳ್ಳಬೇಕು. ಆ ಗ್ರಾಮದ ನೈರ್ಮಲ್ಯ ಮತ್ತು ಆರೋಗ್ಯವನ್ನು ಕಾಪಾಡುವಲ್ಲಿ ಅಧ್ಯಕ್ಷ ಮತ್ತು ಗುರ್ರಕ್ಕನ ಪಾತ್ರ

[2] ಗಾದೆ ಗುರ್ರಕ, ಕೋಟಿಗಾನ ಹಳ್ಳಿ ರಾಮಯ್ಯ, ವಿಶ್ವಾಲಯ ಪ್ರಕಾಶನ, 1999, ಪು ಸಂ. 6

[3] ಗಾದೆ ಗುರ್ರಕ, ಕೋಟಿಗಾನ ಹಳ್ಳಿ ರಾಮಯ್ಯ, ವಿಶ್ವಾಲಯ ಪ್ರಕಾಶನ, 1999, ಪು ಸಂ. 17

ಪ್ರಮುಖವಾದದ್ದಾಗಿದೆ. ಜೊತೆಗೆ ಬಯಲು ಬಹಿರ್ದೆಸೆ ಪದ್ಧತಿಯನ್ನು ವಿರೋಧಿಸುತ್ತದೆ. ಹಳ್ಳಿಗಳ ಕೆರೆ–ಕಟ್ಟೆ ಬಾವಿಗಳಲ್ಲಿ ಬಟ್ಟೆ ಒಗೆಯುವುದು, ದನ, ಎಮ್ಮೆ, ಕುರಿಗಳನ್ನು ತೊಳೆಯುವುದು, ರಾಸಾಯನಿಕ ವಸ್ತುಗಳ ಮಿಶ್ರಣವನ್ನು ನೀರಿಗೆ ಸೇರಿಸುವುದು, ಕೊಳವೆ ಬಾವಿಯ ಹತ್ತಿರ ಮಲವಿಸರ್ಜಿಸುವುದು, ಗೊಬ್ಬರದ ಗುಡ್ಡೆ ಹಾಕುವುದು ಹಾಗೂ ಇನ್ನು ಮುಂತಾದ ಕಾರ್ಯಗಳು ಪರಿಸರವನ್ನು ಕೊಳಕು ಮಾಡುತ್ತದೆ. ಅನೈರ್ಮಲ್ಯ ಉಂಟಾಗಿ ಹಲವಾರು ಜೀವಿಗಳಿಗೆ ಆಶ್ರಯವಾಗಿ ಸಾಂಕ್ರಾಮಿಕ ರೋಗಗಳಿಗೆ ಕಾರಣವಾಗುತ್ತದೆ. ಹಾಗಾಗಿ ಪ್ರತಿಯೊಬ್ಬರು ಇಂತಹ ಕೆಲಸಗಳಿಗೆ ಕಡಿವಾಣ ಹಾಕಿ ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕು. ಹಾಗಿದ್ದಾಗ ಮಾತ್ರ ಉತ್ತಮ ಪರಿಸರ ನಿರ್ಮಾಣವಾಗುತ್ತದೆ ಎನ್ನುವುದು ನಾಟಕದ ಉದ್ದೇಶವಾಗಿದೆ. ಗುರ್‍ರಕ್ಕನಂತಹ ಜನರು ಪ್ರತಿ ಹಳ್ಳಿಯಲ್ಲಿಯೂ ಇರುತ್ತಾರೆ.

ಸ್ವಚ್ಛತೆ ಮತ್ತು ನೈರ್ಮಲ್ಯ ಸರ್ಕಾರಗಳು ಹಲವಾರು ಯೋಜನೆ, ಹಾಗೂ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಸ್ವಚ್ಛಭಾರತ ಅಭಿಯಾನ ಗಾಂಧೀಜಿಯವರೆ ಆರಂಭಿಸಿದ್ದರು. ಅವರು ಉತ್ತಮ ಪರಿಸರಕ್ಕೆ ಒತ್ತು ಕೊಟ್ಟಿದ್ದರು. ಅದು ಹೆಚ್ಚು ಪ್ರಚಲಿತಕ್ಕೆ ಬಂದಿದ್ದು ನರೇಂದ್ರ ಮೋದಿಯವರ ಕಾಲದಲ್ಲಿ. 2014 ಅಕ್ಟೋಬರ್ 2ರಲ್ಲಿ ನರೇಂದ್ರ ಮೋದಿಯವರು ದೆಹಲಿಯ ರಾಜ್‌ಘಾಟ್‌ನಲ್ಲಿ ರಸ್ತೆಯೊಂದನ್ನು ಗುಡಿಸುವುದರ ಮೂಲಕ ಆರಂಭ ಮಾಡಿದರು. ಅವರೆ ಸ್ವತಃ ಕೈಯಲ್ಲಿ ಪೊರಕೆ ಹಿಡಿದು, ಸ್ವಚ್ಚಗೊಳಿಸಿ ಸ್ವಚ್ಛಭಾರತ ಅಭಿಯಾನಕ್ಕೆ ಚಾಲನೆ ನೀಡುವುದರ ಮೂಲಕ ಜನತೆಯಲ್ಲಿ ಜಾಗೃತಿಯನ್ನುಂಟು ಮಾಡಿದರು. ಇದರಿಂದ ಪ್ರೇರಣೆಗೊಂಡ ಜನತೆ ತಮ್ಮ ಸುತ್ತಮುತ್ತಲಿನ ಕಸವನ್ನೆಲ್ಲ ಸ್ವಚ್ಛಗೊಳಿಸಿದರು. ಇದು ಗಾಂಧೀಜಿಯವರ 150ನೇ ಜನ್ಮ ದಿನಾಚರಣೆಯ ಅಂಗವಾಗಿ ತನ್ನ ಗುರಿ ತಲುಪಿಸುವ ಉದ್ದೇಶ ಹೊಂದಿದೆ.

2008ರಲ್ಲಿ (ಖಿಣಾಚಿಟ ಙಚಿಟುಾಚಿಣಾಟಿ ಅಚಿಟಿಚಿಟುಟಿ) (ಒಟ್ಟು ನೈರ್ಮಲ್ಯ ಅಭಿಯಾನ) ವನ್ನು ಪ್ರಾರಂಭಿಸಲಾಯಿತು. ಆನಂತರ ಅದನ್ನು 2012 ಏಪ್ರಿಲ್ 1ರಲ್ಲಿ 'ನಿರ್ಮಲ್ ಭಾರತ್ ಅಭಿಯಾನ್' ಎಂದು ಮನಮೋಹನಸಿಂಗ್ ಅವರು ಮರುನಾಮಕರಣ ಮಾಡಿದರು. ಈ ಅಭಿಯಾನವು ಬಯಲು ಮಲ ವಿಸರ್ಜನೆ ಪದ್ಧತಿಯನ್ನು ಕಡಿಮೆಗೊಳಿಸುವಲ್ಲಿ ಸಣ್ಣ ಪರಿಣಾಮ ಬೀರಿತು. ಆದರೆ ಮಕ್ಕಳ ಆರೋಗ್ಯದಲ್ಲಿ ಯಾವುದೇ ಸುಧಾರಣೆ ತರಲಿಲ್ಲ. ಸ್ವಚ್ಛ ಭಾರತಕ್ಕೆ ಹೋಲಿಸಿದರೆ ಇದು ಅಷ್ಟು ಪರಿಣಾಮ ಬೀರಲಿಲ್ಲ. ತದನಂತರ 2014 ಸೆಪ್ಟೆಂಬರ್ 24ರಲ್ಲಿ ಕ್ಯಾಬಿನೆಟ್‌ನಿಂದ ಅನುಮೋದನೆ ಪಡೆದು ಸ್ವಚ್ಛಭಾರತ ಅಭಿಯಾನವಾಗಿ ಮಾರ್ಪಟ್ಟಿತು.

2014 ರಿಂದ ಇಲ್ಲಿಯವರೆಗೆ ಒಂದು ಅಂಕಿ ಅಂಶಗಳ ಪ್ರಕಾರ 9,22,51,109 ಮನೆ ನಿರ್ಮಿತ ಶೌಚಾಲಯಗಳನ್ನು ನಿರ್ಮಿಸಲಾಗಿದೆ. 5,52,191 ಬಯಲು ಮಲ ವಿಸರ್ಜನೆಯ ಮುಕ್ತ ಹಳ್ಳಿಗಳಾಗಿವೆ. ಹಾಗೂ 604 ಜಿಲ್ಲೆಗಳು, 28 ರಾಜ್ಯಗಳು ತೆರೆದ ಮಲವಿಸರ್ಜನೆ ಮುಕ್ತ ರಾಜ್ಯಗಳಾಗಿವೆ. ಈ ಮೇಲಿನ

ಅಂಕಿ ಅಂಶಗಳನ್ನು ಗಮನಿಸಿದಾಗ ಸ್ವಚ್ಛ ಭಾರತ ಅಭಿಯಾನ ಯಶಸ್ವಿಯಾಯಿತು ಎಂದು ನಮಗೆ ಅನ್ನಿಸುತ್ತದೆ. ಆದರೆ ಅದು ಇನ್ನು ಪೂರ್ತಿಯಾಗಿ ಯಶಸ್ವಿಯಾಗಿಲ್ಲ. ಅದರ ಉದ್ದೇಶ ಮತ್ತು ಗುರಿಯನ್ನು ತಲುಪಿಲ್ಲ. ಈಗಲೂ ನಾವು ಅನೇಕ ಸ್ಥಳಗಳಲ್ಲಿ ಕಸ, ಕಲುಷಿತ ವಸ್ತುಗಳು, ಶೌಚಾಲಯಗಳಿಲ್ಲದ ಮನೆಗಳನ್ನು ಕಾಣಬಹುದು. ಇದನ್ನು ಬದಲಾಯಿಸುವ, ಪರಿಸರವನ್ನು ಸ್ವಚ್ಛವಾಗಿಡಲು ಭಾರತದ ಪ್ರತಿಯೊಬ್ಬ ನಾಗರೀಕನು ಸಹಕರಿಸಬೇಕಾಗಿದೆ. ಸ್ವಚ್ಛಭಾರತ ಅಭಿಯಾನವು ಸುಮಾರು ಶೇ.೮೦ ರಷ್ಟು ಯಶಸ್ವಿಯನ್ನು ಸಾಧಿಸಿದರೆ, ಶೇ.20ರಷ್ಟು ಹಾಗೆಯೇ ಉಳಿದಿದೆ. ನಮ್ಮ ಸುತ್ತಮುತ್ತಲಿನ ವಾತಾವರಣವನ್ನು ಶುದ್ಧವಾಗಿಟ್ಟುಕೊಳ್ಳುವ ಹಾಗೂ ದಿನನಿತ್ಯದ ಸ್ವಚ್ಛತೆಗೆ ಉತ್ತೇಜನ ನೀಡುವುದರ ಮೂಲಕ ಒಳ್ಳೆಯ ನೈರ್ಮಲ್ಯವನ್ನು ಸಾಧಿಸಬಹುದಾಗಿದೆ. ಇದು ಎಲ್ಲರ ಜವಾಬ್ದಾರಿಯಾಗಿದೆ.

ಬಯಲು ಮಲ ವಿಸರ್ಜನೆ ಎನ್ನುವುದು ಸಾಮಾಜಿಕ ಅಪರಾಧವಾಗಿದೆ ಎನ್ನಬಹುದು. ಅದರಿಂದ ಪರಿಸರ ರೋಗಾಣುಗಳ ಗೂಡಾಗುತ್ತದೆ. ಶೌಚಾಲಯವನ್ನು ನಿರ್ಮಿಸಿಕೊಳ್ಳಲು ಸರ್ಕಾರ ಗ್ರಾಮ ಪಂಚಾಯ್ತಿವತಿಯಿಂದ ಧನ ಸಹಾಯವನ್ನು ಮಾಡುತ್ತದೆ. ಅದನ್ನು ಪ್ರತಿಯೊಬ್ಬರು ಸದ್ಬಳಕೆ ಮಾಡಿಕೊಳ್ಳಬೇಕು. ಆರೋಗ್ಯ ಪ್ರತಿಯೊಬ್ಬರಿಗೂ ಮುಖ್ಯವಾದದ್ದು ಅದನ್ನು ಕಾಪಾಡಿಕೊಳ್ಳಬೇಕು. ಬಯಲು ಬಹಿರ್ದೆಸೆ ಪದ್ಧತಿಯಿಂದ ಎಲ್ಲರು ಮುಕ್ತವಾಗಬೇಕು. ಹಳ್ಳಿಗಳ ಕೆರೆ-ಕಟ್ಟೆಗಳಲ್ಲಿ ಬಟ್ಟೆ ಒಗೆಯುವುದು ದನ, ಎಮ್ಮೆ, ಕುರಿಗಳನ್ನು ತೊಳೆಯುವುದು, ರಾಸಾಯನಿಕ ವಸ್ತುಗಳನ್ನು ನೀರಿಗೆ ಸೇರಿಸುವುದು, ಕೊಳವೆ ಬಾವಿಯ ಹತ್ತಿರ ಮಕ್ಕಳು, ದೊಡ್ಡವರು ಮಲ ವಿಸರ್ಜಿಸುವುದು, ಗೊಬ್ಬರ ಗುಡ್ಡೆ ಹಾಕುವುದು ಹಾಗೂ ಇನ್ನು ಮುಂತಾದ ಕಾರ್ಯಗಳು ಪರಿಸರವನ್ನು ಕೊಳಕು ಮಾಡುತ್ತದೆ. ಇದರಿಂದ ಅನೈರ್ಮಲ್ಯ ಉಂಟಾಗಿ ಹಲವಾರು ಜೀವಿಗಳಿಗೆ ಆಶ್ರಯವಾಗಿ ಸಾಂಕ್ರಾಮಿಕ ರೋಗಗಳಾದ ಕಾಲರಾ, ಪ್ಲೇಗ್, ಮಲೇರಿಯಾ, ಅತಿಸಾರಭೇದಿ, ಟೈಫಾಯಿಡ್‌ಗಳಿಗೆ ಕಾರಣವಾಗುತ್ತದೆ. ಪ್ರತಿಯೊಬ್ಬರು ಉತ್ತಮ ಪರಿಸರ ನಿರ್ಮಾಣವಾಗುವುದಕ್ಕೆ ಸಹಕರಿಸಬೇಕು ಎನ್ನುವುದು ಹಾಗೂ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ನಾಟಕ ಮೂಡಿ ಬಂದಿದೆ.

'ಕಳ್ಳಬುಂಡೆ ನಮ್ಮವ್ವ' ನಾಟಕವು ಸಾಮಾಜಿಕ ಪಿಡುಗಾದ ಮಧ್ಯಪಾನವನ್ನು ವಿರೋಧಿಸಿ ಬರೆದಿರುವಂತ ನಾಟಕವಾಗಿದೆ. ಇದು ಮಧ್ಯಪಾನದ ದುರಭ್ಯಾಸದಿಂದ ಛಿದ್ರವಾಗಿರುವ ಬಡವರ ಬದುಕನ್ನು ಕುರಿತದ್ದಾಗಿದೆ. ಜೊತೆಗೆ ಅದರಿಂದ ಉಂಟಾಗುವ ದುಷ್ಪರಿಣಾಮಗಳನ್ನು ತಿಳಿಸುತ್ತದೆ. ಈ ನಾಟಕವು ಬೆಂಗಳೂರು ನಗರದ ಸ್ಲಂ ಮತ್ತು ಉಪನಗರಗಳಲ್ಲಿ ನೂರಾರು ಪ್ರದರ್ಶನಗಳನ್ನು ಕಂಡಿದೆ. ಮಧ್ಯಪಾನಕ್ಕೆ ಬಲಿಯಾಗಿ ಮತ್ತೆ ಅದರಿಂದ ಹೊರಬಂದು ನೈತಿಕ ಬದುಕನ್ನು ನಡೆಸುವ ಕರಿಯಣ್ಣ ಮತ್ತು ಆತನ ಹೆಂಡತಿ ಈ ನಾಟಕದ ಕೇಂದ್ರ ಬಿಂದುವಾಗಿದ್ದಾರೆ. ಕೆಂಚಣ್ಣ ಮತ್ತು ನಾಗಣ್ಣ ಎನ್ನುವುದು ಇತರ ಪಾತ್ರಗಳಾಗಿ ಕಂಡುಬರುತ್ತದೆ.

ಮಹಾತ್ಮ ಗಾಂಧೀಜಿಯವರು ಕುಡಿತವನ್ನು ವಿರೋಧಿಸುತ್ತಿದ್ದರು ಮತ್ತು ಮದ್ಯಮುಕ್ತ ಸಮಾಜದ ಕನಸನ್ನು ಕಂಡವರಾಗಿದ್ದಾರೆ. 'ಬೆಂಕಿಯು ದೇಹವನ್ನು ನಾಶ ಮಾಡಿದರೆ, ಮಧ್ಯ ಮತ್ತು ಮಾದಕ ವಸ್ತು ದೇಹ ಮತ್ತು ಆತ್ಮ ಎರಡನ್ನೂ ನಾಶಮಾಡುತ್ತದೆ' ಎಂದು ಹೇಳಿದ್ದಾರೆ. ಕುಡಿತದ ಗಂಧವೇ ಗೊತ್ತಿಲ್ಲದ ಕರಿಯಣ್ಣ ಮಧ್ಯವ್ಯಸನಕ್ಕೆ ತುತ್ತಾಗಿ ಅದರಿಂದ ಉಂಟಾದ ದಾರುಣ ಸ್ಥಿತಿಯನ್ನು ನಾಟಕಕಾರರು ನಾಟಕದಲ್ಲಿ ಮೂಡಿಸಿದ್ದಾರೆ. ಯಾವುದೇ ಆಸೆ–ಆಮಿಷಕ್ಕೆ ಒಳಗಾಗದೆ ನೆಮ್ಮದಿಯ ಜೀವನವನ್ನು ನಡೆಸುವ ಕರಿಯಣ್ಣ ನಂತವರು ಇದ್ದಾರೆ. ದುಶ್ಚಟ್ಟಕ್ಕೆ ಬಲಿಯಾಗಿರುವ ಕೆಂಚಣ್ಣ ಮತ್ತು ನಾಗಣ್ಣನವರಂತವರು ಇದ್ದಾರೆ. ಉತ್ತಮ ಜೀವನ ನಡೆಸುವ ಕರಿಯಣ್ಣನಂತಹ ವ್ಯಕ್ತಿಗಳಿಗೆ ಬಾಹ್ಯ ಒತ್ತಡಗಳು ಸಮಾಜದಲ್ಲಿ ಹೇಗೆ ಪರಿಣಾಮ ಬೀರುತ್ತವೆ ಎನ್ನುವುದಕ್ಕೆ ಕೆಂಚಣ್ಣ ಮತ್ತು ನಾಗಣ್ಣನವರೆ ಸಾಕ್ಷಿ. ಕರಿಯಣ್ಣನನ್ನು ಕುಡಿಯಲು ಪ್ರೇರೇಪಿಸಿದ್ದಲ್ಲದೆ, ಬಲವಂತವಾಗಿ ಮಧ್ಯಪಾನ ಮಾಡಿಸುವುದು ಒಂದು ಸಾಮಾಜಿಕ ವ್ಯವಸ್ಥೆ ಹೇಗೆ ವರ್ತಿಸುತ್ತದೆ ಎಂಬುದನ್ನು ನಾಟಕದಲ್ಲಿ ಬಿಂಬಿಸಲಾಗಿದೆ.

ಯಾವುದೇ ರೂಪದ ಮಧ್ಯ ಮತ್ತು ಮಾದಕ ದ್ರವ್ಯದ ಚಟ ಒಬ್ಬ ಮನುಷ್ಯನನ್ನೂ ದೈಹಿಕವಾಗಿ, ಮಾನಸಿಕವಾಗಿ, ಆರ್ಥಿಕವಾಗಿ, ಸಾಂಸಾರಿಕವಾಗಿ, ನಿರ್ನಾಮ ಮಾಡಿಬಿಡುತ್ತದೆ. ಕರಿಯಣ್ಣ ಕುಡಿದ ಹಮಲಿನಲ್ಲಿ ಆತನ ಹೆಂಡತಿಯನ್ನು ಬೈಯುತ್ತಾನೆ. "ಪುರುಷ ಸಮಾಜದ ಶೋಷಣೆ ಎನ್ನುವುದು, ನಾಲ್ಕು ಗೋಡೆಗಳ ಮಧ್ಯೆ ನಡೆಯುವ ಕುಡುಕ ಗಂಡನ ಹೊಡೆತ–ಬಡಿತಗಳಿಂದ ಹಿಡಿದು ಅತ್ಯಾಚಾರ, ಕೊಲೆಯವರೆಗೂ ವೈವಿಧ್ಯಮಯವಾಗಿ ಹರಡಿಕೊಂಡಿದೆ"[4] ಎನ್ನುವ ಮಾತುಗಳು ಕುಡಿತದಿಂದ ಎಂತಹ ಕೆಲಸಗಳನ್ನಾದರು ಮಾಡಿಸಿ ಬಿಡುತ್ತದೆ ಎನ್ನುವುದಕ್ಕೆ ಉದಾಹರಣೆಯಾಗಿದೆ. 'ಭಾರತಕ್ಕೆ ನನ್ನನ್ನು ಒಂದು ಘಂಟೆಗಳ ಕಾಲ ಸರ್ವಾಧಿಕಾರಿಯಾಗಿ ನೇಮಿಸಿದರೆ ನಾನು ಮಾಡಲಿರುವ ಮೊದಲ ಕೆಲಸ ಪರಿಹಾರವನ್ನು ನೀಡದೆ ಎಲ್ಲಾ ಮಧ್ಯದಂಗಡಿಗಳನ್ನು ಮುಚ್ಚಿಸುವುದು' ಎನ್ನುವ ಗಾಂಧೀಜಿಯವರ ಮಾತು ಕುಡಿತ ವಿರೋಧಿಯಾಗಿದೆ.

ಮದ್ಯಪಾನ, ಧೂಮಪಾನದಂತ ಸಮಸ್ಯೆಗಳು ತಳಸಮುದಾಯದವರಲ್ಲಿ ಮತ್ತು ದಲಿತ ಸಮುದಾಯಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಕಾರಣ ಉತ್ತಮ ಶಿಕ್ಷಣ ದೊರೆಯದೆ ಅರಿವಿನ ಕೊರತೆ ಹಾಗೂ ಹಲವಾರು ಒತ್ತಡಗಳು. ಸಮಾಜದಲ್ಲಿ ಎಲ್ಲಾ ವರ್ಗದ ಜನರು ಕುಡಿತಕ್ಕೆ ದಾಸರಾಗಿದ್ದಾರೆ. ಇದರಿಂದ ಹೊರಬಾರದೆ ನಲುಗಿ ಹೋಗಿದ್ದಾರೆ. ಬೆಳಗಿನಿಂದ ಸಂಜೆಯವರೆಗೂ ಒಂದಲ್ಲ ಒಂದು ರೀತಿಯ ಕೆಲಸದಲ್ಲಿ ತೊಡಗಿಕೊಂಡು ಹಣಸಂಪಾದನೆ ಮಾಡುತ್ತಾರೆ. ಬಂದ ಹಣವನ್ನೆಲ್ಲಾ ಮನೆಗೆ ಕೊಡದೆ ಕುಡಿತಕ್ಕೆ ವಿನಿಯೋಗಿಸುತ್ತಾರೆ. ಇಲ್ಲಿ ಕರಿಯಣ್ಣ, ಕೆಂಚಣ್ಣ, ನಾಗಣ್ಣನ ಪರಿಸ್ಥಿತಿಯೂ ಇದಕ್ಕೆ ಪೂರಕವಾಗಿದೆ. ಇಂತಹ ಕುಟುಂಬಗಳು ಬೀದಿಪಾಲಾಗುತ್ತವೆ. ಜೀವನ ನಿರ್ವಹಿಸಲು ತುಂಬಾ

[4] ವಿಜಯಾನ್ವೇಷಣೆ ಡಾ.ವಿಜಯಾದಬ್ಬೆ, ಅಭಿನಂದನಾ ಗ್ರಂಥ ಸಮಿತಿ, 2004, ಪು–556, (ಸ), ಡಾ.ಎಸ್.ಡಿ.ಶಶಿಕಲಾ, ಡಾ.ಕೆ.ಎಸ್.ರತ್ನಮ್ಮ, ಡಾ.ಮಂಜುಳ ಹುಲ್ಲಳ್ಳಿ.

ಕಷ್ಟಕರವಾಗುತ್ತದೆ. ತಾಯವ್ವ ಮತ್ತು ಆ ಊರಿನ ಮಹಿಳೆಯರು ತಮ್ಮ ಗಂಡಂದಿರ ಕುಡಿತವನ್ನು ವಿರೋಧಿಸುತ್ತಾರೆ. ಸರಿಯಾದ ದಾರಿಗೆ ತರುವುದರ ಮೂಲಕ ಸಾಮಾಜಿಕ ಮತ್ತು ಸಾಮೂಹಿಕ ಜವಾಬ್ದಾರಿಯನ್ನು ನಿರ್ವಹಿಸುತ್ತಾರೆ. ದುಶ್ಚಟಗಳಿಗೆ ಬೀಳುವ ಜನರ ಬದುಕಿನ ಸಮಸ್ಯೆಯ ಭೀಕರತೆಯನ್ನು ನಾಟಕವು ಪ್ರತಿನಿಧಿಸುತ್ತದೆ.

ಕರಿಯಣ್ಣ ಕುಡಿತದ ದುಶ್ಚಟಕ್ಕೆ ಬಲಿಯಾಗಿ ಎಲ್ಲವನ್ನು ಕಳೆದುಕೊಳ್ಳುತ್ತಾನೆ. "ನೋಡಿ ಇದೊಂದು ಕುಡಿತದ ವಿಷಚಕ್ರ. ಒಂದ್ಸಾರಿ ಈ ವಿಷಚಕ್ರದಲ್ಲಿ ಸಿಕ್ಕಿದ್ರೆ ಮುಗೀತು. ಎಚ್ಚರ ಆಗೋದ್ರಲ್ಲಿ ಎಲ್ಲಾ ಕಳ್ಕೊಂಡಿರ್‍ತಾನೆ! ಹಣ-ಅಂತಸ್ತು, ಮಾನ-ಮರ್ಯಾದೆ, ಬುದ್ಧಿ-ವಿವೇಕ ಎಲ್ಲಕ್ಕಿಂತ ಹೆಚ್ಚಾಗಿ ಆರೋಗ್ಯ. ಆರೋಗ್ಯ ಕಳ್ಕೋಂಡ ಮೇಲೂ ಕುಡಿಯೋದು ಅಂದ್ರೆ ತನ್ನ ಗೋರಿನ ತನ್ನ ಕೈಯ್ಯಾರೆ ತಾನೆ ತೋಡಿಕೊಳ್ತಾರೆ. ಹೋಗೋದು ಎಂದರ್ಥ! ಕರಿಯಣ್ಣ, ಪಾಪ! ತನ್ನ ಜೊತೆಗಾರರ ಮಾತು ಮೀರಲಾರದೆ ಒಂದು ದಿನ ಕುಡಿದ, ನೀವೆ ನೋಡುದ್ರಲ್ಲ! ಕುಡಿದದ್ದು ಒಂದು ದಿನ ಆದ್ರೆ ಅದು ಅಲ್ಲಿಗ ನಿಲ್ಲಲಿಲ್ಲ. ಮುಂದುವರೀತು, ಮುಂದುವರೀತಾನೆ ಹೊಯ್ತು. ಈವಾಗ ಕರಿಯಣ್ಣ ಒಂದು ರೋಗದ ಗೂಡು, ಯಾರುಗೂ ಬೇಡವಾದ, ಕೆಲಸಕ್ಕೆ ಬಾರದ ಒಂದು ಬೀದಿನಾಯಿಗೂ ಕಡೆಯಾದ ಅಸ್ತಿಪಂಜರ"[5] ಎನ್ನುವ ನಾಟಕಕಾರರ ಮಾತುಗಳು ಕರಿಯಣ್ಣನ ದುರಂತ ಜೀವನವನ್ನು ಚಿತ್ರಿಸುತ್ತದೆ.

ಕುಡಿತ ಬಹಳ ಕೆಟ್ಟದ್ದು ಅದನ್ನು ಮೈಗಂಟಿಸಿಕೊಂಡರೆ ಸ್ವತಂತ್ರವಾಗಿ ಬದುಕಲು ಆಗದೆ, ಸಾಯಲು ಆಗದೆ ಉಭಯ ಸಂಕಟದಲ್ಲಿ ಸಿಲುಕಿಸುತ್ತದೆ. ರಷ್ಯಾ ದೇಶದ ಲಿಯೋ ಟಾಲ್‌ಸ್ಟಾಯ್ ಎಂಬುವವನು ಚಿಕ್ಕವಯಸ್ಸಿನಲ್ಲಿ ಈ ಚಟಕ್ಕೆ ಬಲಿಯಾಗಿ, ನಂತರ ಅದನ್ನು ತ್ಯಜಿಸಿ 'ಹೊಗೆಸೊಪ್ಪಿನ ಯಾವುದೇ ರೂಪದ ಸೇವನೆ ಎಲ್ಲಾ ಚಟಗಳಿಗಿಂತ ಅತ್ಯಂತ ದುಷ್ಟಚಟ' ಎಂದಿದ್ದಾನೆ. ಈ ಚಟ 'ದುಶ್ಚಟಗಳ ರಾಜ' ಎಂದು ಕರೆದಿದ್ದಾನೆ. ಸಮಾಜದಲ್ಲಿ ಕುಡಿತವನ್ನು ಉತ್ತೇಜಿಸುವ ಜನ ಒಂದು ಕಡೆಯಾದರೆ ಅದನ್ನು ವಿರೋಧಿಸುವ ತಾಯವ್ವನಂತವರು ಮತ್ತೊಂದು ಕಡೆ. ಏನೇ ಆಗಲಿ ಕುಡಿತದಿಂದ ದೂರ ಇದ್ದು ಉತ್ತಮ ಜೀವನ ಕಟ್ಟಿಕೊಳ್ಳಲು ಜನರಿಗೆ ಜಾಗೃತಿ ಮೂಡಿಸುವ ನೆಲೆಯಲ್ಲಿ ನಾಟಕ ಮೂಡಿಬಂದಿದೆ.

ಇದೇ ಬಗೆಯಲ್ಲಿ ಸಾಮಾಜಿಕ ಕಳಕಳಿಯಿಂದ ರಚನೆಗೊಂಡಿರುವ ಮತ್ತೊಂದು ನಾಟಕ 'ಸ್ಫೋಟ'. ಪ್ರಕೃತಿನಾಶದೊಂದಿಗೆ ಮಾನವಕುಲದ ಸರ್ವನಾಶವೂ ಅಡಗಿದೆ. ಕಾಡು, ಗಾಳಿ, ಮಳೆ, ಬೆಳೆ ಎಲ್ಲವೂ ಪ್ರಕೃತಿ ಮನುಷ್ಯಕುಲಕ್ಕೆ ನೀಡಿರುವ ವರ. ಆದರೆ ಮಿತಿಮೀರಿದ ಮನುಷ್ಯನ ಸಂತಾನೋತ್ಪತಿಯಿಂದಾಗಿ ಕಾಡೆಲ್ಲವೂ ನಾಡಾಗಿ ಪರಿವರ್ತನೆಗೊಂಡಿದೆ. ಬೆಳೆ ಬೆಳೆಯುವ ಭೂಮಿ ತುಂಡು ತುಂಡಾಗಿ ಹಂಚಿಹೋಗುತ್ತಲಿವೆ. ಪ್ರಕೃತಿ ಮನುಷ್ಯನ ಸ್ವಾರ್ಥಕ್ಕೆ ಬಲಿಯಾಗುತ್ತಲಿದೆ. ಇದು

[5] ಕಳ್ಳಬುಂಡೆ ನಮ್ಮವ್ವ, ಕೋಟಿಗಾನಹಳ್ಳಿ ರಾಮಯ್ಯ, ವಿಶ್ವಾಲಯ ಪ್ರಕಾಶನ, 1999, ಪು. ಸಂ. 113

ತಗ್ಗದ ಹೊರತು ಮನುಷ್ಯನ ಸಾವು ಕಟ್ಟಿಟ್ಟ ಬುತ್ತಿ ಎನ್ನುವುದನ್ನು ಮರೆಯುವಂತಿಲ್ಲ. ಮನುಷ್ಯ ಕುಲದ ಅಳವು-ಉಳವಿನ ಪ್ರಶ್ನೆ ಪ್ರಕೃತಿಯನ್ನವಲಂಬಿಸಿದೆ. ಆದರೆ ಮಿತಿಮೀರುತ್ತಿರುವ ಜನಸಂಖ್ಯಾ ಸಮಸ್ಯೆಯು ಪ್ರಕೃತಿಯ ನಾಶಕ್ಕೂ ಕಾರಣವಾಗುತ್ತಿದೆ. ಜೊತೆಗೆ ಸಾಮಾಜಿಕವಾಗಿಯೂ ಹಲವು ಸಮಸ್ಯೆಗಳನ್ನು ತಂದೊಡ್ಡುತ್ತಿರುವುದನ್ನು ಗಮನದಲ್ಲಿರಿಸಿಕೊಂಡು ಈ ನಾಟಕವನ್ನು ರಚಿಸಲಾಗಿದೆ.

ಹೀಗೆ ಕೋಟಿಗಾನಹಳ್ಳಿ ರಾಮಯ್ಯ ಅವರ ನಾಟಕಗಳಲ್ಲಿ ಸಾಮಾಜಿಕ ಹೊಣೆಗಾರಿಕೆಯನ್ನು ಕಾಣಬಹುದು. ಗಾದೆ ಗುರ್ರಕ್ಕ ನಾಟಕವು ಗ್ರಾಮೀಣ ಸ್ವಚ್ಛತೆ ಮತ್ತು ನೈರ್ಮಲ್ಯವನ್ನು ಕುರಿತದ್ದಾದರೆ. ಕಳ್ಳಬುಂಡೆ ನಮ್ಮವ್ವ ನಾಟಕವು ಮದ್ಯಪಾನ ವಿರೋಧಿಸುವ ನೆಲೆಗಟ್ಟಿನಲ್ಲಿ ಮೂಡಿಬಂದಿದೆ. ಹಾಗೂ ಸ್ಪೋಟ ನಾಟಕವು ಜನಸಂಖ್ಯೆ ಹೆಚ್ಚಳದಿಂದಾಗುವ ದುಷ್ಪರಿಣಾಮಗಳನ್ನು ತಿಳಿಸುತ್ತದೆ. ಮೂರು ನಾಟಕಗಳು ಸಾಮಾಜಿಕ ಜವಾಬ್ದಾರಿಗಳ ಜೊತೆಗೆ ಜನತೆಯಲ್ಲಿ ಜಾಗೃತಿ ಮೂಡಿಸುವ ರೀತಿಯಲ್ಲಿ ರಚನೆಗೊಂಡಿವೆ.

## ಪರಾಮರ್ಶನ ಗ್ರಂಥ


1. ಕೋಟಿಗಾನಹಳ್ಳಿ ರಾಮಯ್ಯ -ಗಾದೆ ಗುರ್ರಕ್ಕ, ವಿಶ್ವಾಲಯ ಪ್ರಕಾಶನ, ಬೆಂಗಳೂರು-1999
2. ಕೋಟಿಗಾನಹಳ್ಳಿ ರಾಮಯ್ಯ- ಕಳ್ಳಬುಂಡೆ ನಮ್ಮವ್ವ,ವಿಶ್ವಾಲಯ ಪ್ರಕಾಶನ,ಬೆಂಗಳೂರು-1999
3. ಡಾ.ಪಿ.ಎನ್.ಶಂಕರ, ಎಲ್ಲರಿಗೆ ಆರೋಗ್ಯ ಎಲ್ಲರೂ ಆರೋಗ್ಯಕ್ಕೆ
4. ಕೋಟಿಗಾನಹಳ್ಳಿ ರಾಮಯ್ಯ, ಸ್ಫೋಟ, ವಿಶ್ವಾಲಯ ಪ್ರಕಾಶನ, ಬೆಂಗಳೂರು-1999